ಸಾಕ್ಷಿಯನ್ನು ದಿನಾಂಕ 21.02.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಆರ್ ವಕೀಲರಿಂದಃ

ಈ ಕೇಸಿನಲ್ಲಿ ನಾನು ಸಲ್ಲಿಸಿರುವ ತಕರಾರಿನ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ತಿಳಿದುಕೊಂಡಿಲ್ಲ. ಕೆಎ 03 ಬಿ 4506 ನನಗೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 9 ದಾಖಲೆಯ ಎರಡೂ ಪುಟಗಳನ್ನು ತೋರಿಸಿ ಕೇಳಲಾಗಿ ಸಾಕ್ಷಿ ಅದರಲ್ಲಿರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ.

2. ಕೆಎ 03 ಬಿ 4506 ವಾಹನ ನನಗೆ ಸೇರಿದ್ದು ನಾನೇ ಅದರ ಮಾಲಿಕ ಮತ್ತು ಚಾಲಕ ಎಂದು ನಿಪಿ 9 ದಾಖಲೆಯನ್ನು ಪೋಲೀಸ್ ಠಾಣೆಯಲ್ಲಿ ಬರೆದುಕೊಟ್ಟು ಸದರಿ ವಾಹನವನ್ನು ನನ್ನ ವಶಕ್ಕೆ ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿ ದ್ವಿಚಕ್ರ ವಾಹನದ ಸಾಕ್ಷಿಗೆ ಎಂದು ಹೇಳಿ ಜಯರಾಂ ಎಂಬುವವರು ಸಹಿ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ನಾನು ಸದರಿ ವಾಹನವನ್ನು ಚಾಲನೆ ಮಾಡಿ ಅಪಘಾತ ಪಡಿಸಿದ್ದೇನೆ ಎಂದು ನನ್ನ ಮೇಲೆ ಇದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು, ಆ ಪ್ರಕರಣದಲ್ಲಿ ನಾನು ತಪ್ಪನ್ನು ಒಪ್ಪಿಕೊಂಡು ದಂಡ ಪಾವತಿಸಿದ್ದೇನೆ ಎಂದರೆ ಸಾಕ್ಷಿ ದಂಡವನ್ನು ಪಾವತಿಸುತ್ತೇನೆ ಎಂದು ಜಯರಾಂ ಹೇಳಿ ನನ್ನ ಸಹಿ ಪಡೆದಿದ್ದರು ಎಂದು ನುಡಿಯುತ್ತಾರೆ.

3. ಪೋಲೀಸರು ನೀಡಿದ ನಿಪಿ 8 ನೋಟೀಸ್ ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ. ನನ್ನ ತಪ್ಪಿನಿಂದಲೇ

ಅಪಘಾತವಾಗಿದ್ದರೂ ಜಯರಾಂ ರವರ ಮಾತನ್ನು ಕೇಳಿ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷ್ಯತೆಯಿಂದಲೇ ಅಪಘಾತವಾಗಿ ಜಯರಾಂ ರವರು ಈಗಾಲೂ ಓಡಾಡಲು ಆಗದೇ ಮನೆಯಲ್ಲಿ ಇದ್ದಾರೆ ಎಂದರೆ ಸುಳ್ಳು. ಎಲ್ಲಾ ವಿಚಾರ ನನಗೆ ತಿಳಿದಿದ್ದರೂ ಅರ್ಜಿದಾರನಿಗೆ ಪರಿಹಾರವನ್ನು ನೀಡುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಆ ವಾಹನ ನನ್ನ ಬಳಿ ಇದ್ದು, ನಾನೇ ಅದರ ಮಾಲಿಕ ಮತ್ತು ಚಾಲಕನಾಗಿದ್ದೇನೆ ಎಂದರೆ ಸುಳ್ಳು.

4. ದಿನಾಂಕ 07.05.2017 ರಿಂದ 17.05.2017 ರವರೆಗೂ ಅರ್ಜಿದಾರ ಕೋಲಾರದ ಆಸ್ಪತ್ರೆಯಲ್ಲಿ ಅಪಘಾತದಿಂದ ಆದ ಗಾಯಗಳಿಗಾಗಿ ಚಿಕಿತ್ಸೆ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ನಿರ್ಲಕ್ಷ್ಯತೆಯಿಂದಲೇ ಅಪಘಾತವಾಗಿತ್ತು ಎಂದರೆ ಸುಳ್ಳು. ಅರ್ಜಿದಾರ ಚಿಕಿತ್ಸೆ ಪಡೆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಹ ಹಾಜರುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರ ಈ ಕೇಸಿನಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ:**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.